ARCHIDPLY
Decor For Better Living

November 16, 2024

**The General Manager**
Dept. of Corporate Services
Bombay Stock Exchange Limited
Floor 25th P.J. Towers
Dalal Street
Mumbai - 400 001.

**The Listing Department**
**National Stock Exchange of India Ltd.**
Exchange Plaza, Plot no. C/1, G Block,
Bandra-Kurla Complex Bandra (E)
**Mumbai - 400 051**

Dear Sir,

**Sub: Copy of Public Notice of Unaudited Financial Results for the quarter & half year ended September 30, 2024 advertised in Newspapers**

**Ref: BSE Scrip Code: 543231**

**NSE: Stock Code: ADL**

Please find enclosed herewith a copy of public notice advertised in the newspapers with regard to Unaudited Financial Results for the quarter & half year ended September 30, 2024.

Please find attached copy of newspaper advertisement.

This is for your information and record.

Thanking you.
Yours faithfully,
For **Archidply Decor Limited**

Shyam Daga

Digitally signed by Shyam Daga
DN: c=IN, o=Personal, postalCode=560046, l=Bangalore, st=Karnataka, street=Flat no 315,Mangalya Residency Benson Town, Bangalore North, Bangalore North Karnataka India-560046-, title=3327, 2.5.4.20=9885d0d5dc361094aade90b71e8b9251e6fa32b6391a3ecbd94d4d7b7974da02, serialNumber=b266028a42d0033530926aa468ee375b0d7f43ca586146d656983929d97015a8, email=shyamdaga1302@gmail.com, cn=Shyam Daga
Date: 2024.11.16 23:44:44 +05'30'

**(Shyam Daga)**
**Managing Director**
**DIN: 00561803**
**Encl:a/a**

# ನ.30ರೊಳಗೆ ಕೂಪನ್ ವಾಪಸ್‌ಗೆ ಅವಕಾಶ

ವಿಜಯವಾಣಿ ಓದಿ ಕಾರು ಗೆಲ್ಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕನ್ನಡದ ನಂ.1 ದಿನಪತ್ರಿಕೆ 'ವಿಜಯವಾಣಿ' ತನ್ನ ಓದುಗರಿಗೆ ನೀಡಿದ್ದ ಮೆಗಾ ಕೊಡುಗೆ ಸ್ಪರ್ಧೆಯು ಕೊನೆಗೊಂಡಿದ್ದು, ಓದುಗರು ನಿಗದಿತ ಮಾದರಿಯಲ್ಲಿ ಅಂಟಿಸಿರುವ ಕೂಪನ್‌ಗಳನ್ನು ನ.30ರ ಒಳಗೆ ಈ ಕೆಳಗಿನ ವಿಳಾಸಗಳಿಗೆ ತಲುಪಿಸಬಹುದು.

ವಿಜಯವಾಣಿ MEGA ಕೊಡುಗೆ*

**50 ಭರ್ತಿ ಮಾಡಿರುವ ಕೂಪನ್ ಹಿಂದಿರುಗಿಸಿ:** ಕಳೆದ ಆ.2ರಿಂದ ನ.14ರ ವರೆಗೂ 'ವಿಜಯವಾಣಿ ಯಲ್ಲಿ 80 ಕೂಪನ್‌ಗಳು ಪ್ರಕಟವಾಗಿದ್ದು, ಈ ಪೈಕಿ 45 ಸ್ಟ್ಯಾಂಡರ್ಡ್ (ನಿಗದಿತ) ಹಾಗೂ 5 ಮಾಸ್ಟರ್ ಕೂಪನ್‌ಗಳನ್ನು ಅಂಟಿಸಿ ವಿಜಯವಾಣಿಗೆ ತಲುಪಿಸ ಬಹುದು. ಸ್ಪರ್ಧಾ ವಿಜೇತರ ಆಯ್ಕೆಯು ಡಿ.10ರಂದು ಸಂಸ್ಥೆಯ ಕಚೇರಿಯಲ್ಲಿ ನಡೆಯಲಿದೆ. ಬಹುಮಾನ ವಿಜೇತರ ಘೋಷಣೆ ಡಿ.20ರಂದು ಪ್ರಕಟಿಸಲಾಗುತ್ತದೆ.

## ಓದುಗರು ಮೆಗಾ ಕೂಪನ್ ಈ ವಿಳಾಸಕ್ಕೆ ತಲುಪಿಸಿ

- **ಚಿಕ್ಕಬಳ್ಳಾಪುರ:** ಮಾರುತಿ ಡಿಜಿಟಲ್ ಸ್ಟುಡಿಯೋ, ಬಾಲಾಜಿ ಟಾಕೀಸ್ ಪಕ್ಕ, ಬಿ.ಬಿ. ರಸ್ತೆ, ಚಿಕ್ಕಬಳ್ಳಾಪುರ - 562101
- **ಗೌರಿಬಿದನೂರು:** ಎನ್.ವಿ. ಗೌರೀಶ್ ಪ್ರಿಂಟಿಂಗ್ ಪ್ರೆಸ್, ಆಚಾರ್ಯ ಕಾಂಪ್ಲೆಕ್ಸ್, ಮಧುಗಿರಿ ರಸ್ತೆ, ಗೌರಿಬಿದನೂರು - 561208
- **ಬಾಗೇಪಲ್ಲಿ:** ನಂದಿನಿ ಮಿಲ್ಕ್ ಸೆಂಟರ್, ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ, ಡಿವಿಜಿ ಮುಖ್ಯರಸ್ತೆ, ಬಾಗೇಪಲ್ಲಿ - 561207.
- **ಶಿಡ್ಲಘಟ್ಟ:** ವಿಜಯವಾಣಿ ಕಚೇರಿ, ಮಳಿಗೆ ಸಂಖ್ಯೆ 1, ಮುನಿಸಿಪಲ್ ಬಿಲ್ಡಿಂಗ್, ಅಶೋಕ ರಸ್ತೆ, ಧೂಮಿಕಾ ಗಣಪತಿ ದೇವಸ್ಥಾನದ ಹತ್ತಿರ, ಶಿಡ್ಲಘಟ್ಟ - 562105
- **ಚಿಂತಾಮಣಿ:** ಗ್ರೇಟ್ ಇಂಡಿಯಾ ಎಲೆಕ್ಟ್ರಾನಿಕ್ಸ್, ಗಜಾನನ ವೃತ್ತ, ಎಂ.ಜಿ. ರಸ್ತೆ, ಚಿಂತಾಮಣಿ - 563125.
- **ಗುಡಿಬಂಡೆ:** ವೆಂಕಿ ಬುಕ್ ಅಂಡ್ ಸ್ಟೇಷನರೀಸ್, ಪೋಸ್ಟ್ ಆಫೀಸ್ ಎದುರು, ಗುಡಿಬಂಡೆ - 561209.

ಸ್ಪರ್ಧೆಯ ವಿವರಗಳು ಹಾಗೂ ಇನ್ನಿತರ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

vijayavani.net ನೋಡಿ

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 8884432440**

ಕ್ಷಣಕ್ಷಣದ ಸುದ್ದಿಗಾಗಿ vijayavani.net ಕ್ಲಿಕ್ ಮಾಡಿ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ [ರಿ.]
ಮೂಡುಬಿದಿರೆ – 574227, ಮಂಗಳೂರು, ದ.ಕ.
ಡ್ರೈವರ್ಸ್ ಬೇಕಾಗಿದ್ದಾರೆ
ಕಾಲೇಜು ಬಸ್ಸು ಮತ್ತು ನೀರಿನ ಟ್ಯಾಂಕರ್‌ಗೆ ಹೆವಿ ಲೈಸೆನ್ಸ್ ಹೊಂದಿರುವ ಅನುಭವಿ ಚಾಲಕರು ಬೇಕಾಗಿದ್ದಾರೆ.
ಉತ್ತಮ ವೇತನದೊಂದಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿದೆ.
ಅರ್ಹ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಕೂಡಲೇ ಸಂಪರ್ಕಿಸಿ.
+91 7353756204 +91 9035551025

Grand Flea Market Presents
ಇಂಡಿಯನ್ ಆರ್ಟಿಸನ್ ಬಜಾರ್
Indian Artisan Bazaar
Arts, Crafts, Handlooms & Lifestyle Exhibition


Date: 8th November 2024 to 17th November 2024
10 Days Exhibition
Timings: 10.30 am to 7 pm
Karnataka Chitrakala Parishath
Kumara Krupa Road, near Shivananda Circle Bengaluru
Grand Flea Market
10 DAYS EXHIBITION | 100+ STALLS | Live PERFORMANCE | Entry FREE
For Details Contact: 6364685716/9036658774


## ARCHIDPLY DECOR LIMITED

Registered office : Sy.No. 19, KSSIDC Industrial Area, Bangalore Road, Katamachanahalli, Chintamani, Chikkaballapur, Karnataka - 563 125, Tel: +91 9611190305
website : www.archidplydecor.com, email: bangalore@archidply.com, CIN : L20231KA2017PLC179929

**EXTRACT OF STANDALONE UNAUDITED FINANCIAL RESULTS FOR THE QUARTER AND HALF YEAR ENDED 30.09.2024** (Rs. In Lakhs)

| Particulars | Quarter Ended 30.09.2024 | Half year ended 30.09.2024 | Quarter Ended 30.09.2023 | Year ended 31.03.2024 |
|---|---|---|---|---|
| | Unaudited | Unaudited | Unaudited | Audited |
| **Total Income** | 1,448.98 | 2,711.71 | 1,326.80 | 4,842.99 |
| Net Profit (Before tax, Exceptional items) | 22.87 | 8.51 | 34.42 | 78.78 |
| Net Profit (Before tax and after Exceptional items) | 22.87 | 8.51 | 34.42 | 78.78 |
| Net Profit for the perod after tax (after exceptional items) | 26.48 | 4.61 | 22.21 | 2.86 |
| Total Comprehensive Income for the period (Comprising Profit/(loss) for the period (after tax) | 26.48 | 6.41 | 20.71 | 9.49 |
| Paid-up equity share capital (Face value Rs. 10 per share) | 556.63 | 556.63 | 556.63 | 556.63 |
| other Equity | | 4,524.97 | | 4,518.56 |
| Basic & Diluted Earnings Per Share (EPS) | | | | |
| not annualised | 0.48 | 0.08 | 0.40 | 0.05 |

**Notes 1.** The above unaudited Financial results have been reviewed by the Audit Committee and approved by the Board of Directors of the Company at its meetings held on 14th November, 2024. **2.** This unaudited Financial Results have been prepared in accordance with the Companies (Indian Accounting Standards) Rules, 2015 (Ind AS) prescribed under Sec 133 of Companies Act,2013 and other recognised accounting practises and policies to the extent applicable. **3.** Figures for the previous periods have been regrouped and reclassified to confirm to the classification of the current period, wherever necessary. **4.** There are no exceptional / extraordinary items during the Year ended 31,March, 2024 and quarter ended 30th September, 2024. **5.** The above is an extract of the detailed format of Quarterly and Annual Financial Results filed with the Stock Exchanges and Regulation 33 of the SEBI (Listing and other Disclosure Requirements) Regulations, 2015. The full format of the Quarterly and Annual Financial Results are available on the stock exchanges **websites - www.nseindia.com, www.bseindia.com** and on the Company's **website www.archidplydecor.com**

Date : November 14, 2024
Place : Bengaluru

for **Archidply Decor Ltd.,**
**Shyam Daga,** Managing Director
DIN:00561803


### ಕ್ಷೇತ್ರದಲ್ಲಿ ಪ್ರಗತಿಗೆ ಅಡ್ಡಿಯಿಲ್ಲ ಎಂದ ಕೈ ಶಾಸಕ ಸುಬ್ಬಾರೆಡ್ಡಿ | ಬೀಚಗಾನಹಳ್ಳಿಯಲ್ಲಿ ಕುಂದುಕೊರತೆ ಸಭೆ


# ಗ್ಯಾರಂಟಿ ಜಾರಿಯಿಂದ ರಾಜ್ಯದೆಲ್ಲೆಡೆ ಅಭಿವೃದ್ಧಿ ಕುಂಠಿತ!

■ ವಿಜಯವಾಣಿ ಸುದ್ದಿಜಾಲ ಗುಡಿಬಂಡೆ

ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತವಾಗಿದ್ದರೂ ತಾಲೂಕಿನಲ್ಲಿ ಅಭಿವೃದ್ಧಿ ಕೆಲಸಗಳನ್ನು ಒತ್ತುಕೊಟ್ಟು ಮಾಡಲಾಗುತ್ತಿದೆ ಎಂದು ಆಡಳಿತಪಕ್ಷದ ಶಾಸಕ ಎಸ್. ಎನ್. ಸುಬ್ಬಾರೆಡ್ಡಿ ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

ತಾಲೂಕಿನ ಬೀಚಗಾನಹಳ್ಳಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಮಾತನಾಡಿದರು. ವಾಸ್ತವದಲ್ಲಿ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚು ಅನುದಾನ ಬಳಕೆ ಮಾಡುತ್ತಿರುವುದರಿಂದ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿವೆ. ಆದರೂ ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ. ವೃದ್ಧಾಪ್ಯ ವೇತನ, ಪಡಿತರಚೀಟಿ, ಪೌತಿ ಖಾತೆ ಸೇರಿ ಮತ್ತಿತರ ಸಮಸ್ಯೆಗಳಿವೆ. ಹಾಗಾಗಿ ಅಧಿಕಾರಿಗಳನ್ನು ಜನರ ಮನೆ ಬಾಗಿಲಿಗೆ ಕರೆತಂದಿದ್ದು, ಸ್ಥಳದಲ್ಲಿಯೇ ಸಮಸ್ಯೆ ಬಗೆಹರಿಸಿಕೊಳ್ಳಬಹುದಾಗಿದೆ ಎಂದರು.

ದರಖಾಸ್ತು ಅರ್ಜಿಗಳ ಬಗ್ಗೆ ಪರಿಶೀಲಿಸಿ ನಮೂನೆ 53ರಲ್ಲಿ ಅರ್ಜಿ ಸಲ್ಲಿಸಿದವರಿಗೆ ಕಾನೂನು ಪ್ರಕಾರ ಜಮೀನು ಮಂಜೂರು ಮಾಡಲಾಗುವುದು. ಈ ಅರ್ಜಿಗಳನ್ನು ಒಂದು ವರ್ಷದ ನಂತರ ಇತ್ಯರ್ಥಪಡಿಸಲಾಗುವುದು ಎಂದರು.




ಗುಡಿಬಂಡೆ ತಾಲೂಕಿನ ಬೀಚಗಾನಹಳ್ಳಿಯಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಶಾಸಕ ಎಸ್. ಎನ್. ಸುಬ್ಬಾರೆಡ್ಡಿ, ತಹಸೀಲ್ದಾರ್ ಸಿಗ್ಬತ್‌ವುಲ್ಲಾ, ತಾಪಂ ಇಒ ಹೇಮಾವತಿ ಮತ್ತಿತರರು ಇದ್ದರು.

ಕೃಷಿ, ತೋಟಗಾರಿಕೆ, ಆರೋಗ್ಯ, ಸಿಡಿಪಿಒ, ಅರಣ್ಯ ಸೇರಿ ಇತರ ಇಲಾಖೆಗಳ ಅಂಗಡಿ ಮಳಿಗೆ ತೆರಯಲಾಗಿತ್ತು. ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಅರ್ಹ ರೈತರಿಗೆ ಯಂತ್ರೋಪಕರಣಗಳನ್ನು ಶಾಸಕರು ವಿತರಿಸಿದರು.

ತಾಪಂ ಇಒ ಹೇಮಾವತಿ, ಬೀಚಗಾನಹಳ್ಳಿ ಗ್ರಾಪಂ ಅಧ್ಯಕ್ಷೆ ಶಾಂತಮ್ಮ ಮಹದೇವಪ್ಪ, ಉಪಾಧ್ಯಕ್ಷ ರಮೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೇಶವರೆಡ್ಡಿ, ತೋಟಗಾರಿಕ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ಪಶು ಸಂಗೋಪನೆ ಇಲಾಖೆಯ ಸುಬ್ರಮಣಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಲಕ್ಷ್ಮೀಪತಿರೆಡ್ಡಿ, ಸಿಡಿಪಿಒ ರಫೀಕ್, ಆರೋಗ್ಯಾಧಿಕಾರಿ ಡಾ. ನರಸಿಂಹಮೂರ್ತಿ, ಬಿಸಿಎಂ ಇಲಾಖೆಯ ವಿಸ್ತರಣಾಧಿಕಾರಿ ಶಂಕರಪ್ಪ, ಮುಖಂಡ ನರೇಂದ್ರ ಸೇರಿ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಗ್ರಾಪಂ ಸದಸ್ಯರು ಹಾಗೂ ಮುಖಂಡರು ಇದ್ದರು.

### ಹೆಚ್ಚುತ್ತಿದೆ ಬಾಲ್ಯವಿವಾಹ

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲೂಕಿನಲ್ಲಿ ಬಾಲ್ಯವಿವಾಹ ಪ್ರಕರಣಗಳ ದೂರುಗಳು ಹೆಚ್ಚುತ್ತಿದ್ದು, ಪಾಲಕರು ಮಕ್ಕಳಿಗೆ 18 ವರ್ಷ ತುಂಬಿದ ನಂತರವೇ ಮದುವೆ ಮಾಡಬೇಕು. ಮದುವೆ ಮಾಡಲು ನಿಮಗೆ ಸಮಸ್ಯೆ ಆದರೆ ಸಾಮೂಹಿಕ ವಿವಾಹ ಆಯೋಜಿಸಿದ್ದು, ಅಲ್ಲೇ ವಿವಾಹ ಮಾಡಿ ಎಂದು ಸುಬ್ಬಾರೆಡ್ಡಿ ಸಲಹೆ ನೀಡಿದರು.

### ಪೋಡಿಮುಕ್ತ ತಾಲೂಕು

ತಹಸೀಲ್ದಾರ್ ಸಿಗ್ಬತ್‌ವುಲ್ಲಾ ಮಾತನಾಡಿ, ಅಣ್ಣ-ತಮ್ಮಂದಿರ ಗಲಾಟೆ, ವಿವಿಧ ಕಾರಣಗಳಿಂದಾಗಿ ಪೌತಿ ಖಾತೆ ಮಾಡಿಸಿಕೊಳ್ಳಲು ಆಗದಿದ್ದರೆ, ಎಲ್ಲರೂ ಒಗ್ಗೂಡಿ ಪೌತಿ ಖಾತೆ ಮಾಡಿಸಿಕೊಳ್ಳಬಹುದು. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದಾದ ನಷ್ಟಕ್ಕೆ ಸರ್ಕಾರ ಪರಿಹಾರ ನೀಡಲಿದ್ದು, ಇದರ ಉಪಯೋಗ ಪಡೆದುಕೊಳ್ಳಬೇಕು. ಈಗಾಗಲೇ ತಾಲೂಕನ್ನು ಪೋಡಿಮುಕ್ತ ಮಾಡಲಾಗಿದೆ, ಅನೇಕ ಸರ್ವೇ ನಂಬರ್ ಗಳನ್ನು ದುರಸ್ತಿ ಮಾಡಲಾಗುತ್ತಿದ್ದು, ಈಗಾಗಲೇ 19 ಸರ್ವೇ ನಂಬರ್‌ಗಳನ್ನು ದುರಸ್ತಿ ಮಾಡಲಾಗಿದೆ. ಇದರಿಂದ ಜನರಿಗೆ ಅನುಕೂಲವಾಗಿದೆ. ಅಧಿಕಾರಿಗಳು ಮನೆ ಬಾಗಿಲಿಗೇ ಬಂದಿದ್ದು, ಸಮಸ್ಯೆಗಳಿದ್ದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿದರು.

# ಚಿಂತಾಮಣಿಗೂ ಹಬ್ಬಿದ ವಕ್ಫ್ ವಿವಾದ

### ಎರಡು ಗುಂಪಿನ ನಡುವೆ ಮಾತಿನ ಚಕಮಕಿ | ಪೊಲೀಸರ ಮಧ್ಯಪ್ರವೇಶದಿಂದ ಪರಿಸ್ಥಿತಿ ತಿಳಿ

■ ವಿಜಯವಾಣಿ ಸುದ್ದಿಜಾಲ ಚಿಂತಾಮಣಿ

ರಾಜ್ಯಾದ್ಯಂತ ಹಬ್ಬಿರುವ ವಕ್ಫ್ ವಿವಾದ ಚಿಂತಾಮಣಿಯಲ್ಲೂ ಕಿಚ್ಚು ಹಚ್ಚಿದೆ. ಜಮೀನಿನ ಹಕ್ಕು ಸಂಬಂಧ ರೈತರು ಮತ್ತು ಜಾಮೀಯಾ ಮಸೀದಿ ಗುಂಪಿನ ನಡುವೆ ಶುಕ್ರವಾರ ಮಾತಿನ ಚಕಮಕಿ ನಡೆದು ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ನಗರದ 31ನೇ ವಾರ್ಡ್‌ನ ತಿಮ್ಮಸಂದ್ರದ ಸರ್ವೇ ನಂ.13ರ 2.19 ಎಕರೆ ಮತ್ತು ಸರ್ವೇ ನಂ.20ರ 2 ಎಕರೆ ಜಮೀನು ವಿವಾದದ ಕೇಂದ್ರವಾಗಿದೆ. ಜಾಮೀಯಾ ಮಸೀದಿ ಪದಾಧಿಕಾರಿಗಳು ಜಮೀನು ಮಾಲೀಕತ್ವಕ್ಕೆ ಸಂಬಂಧಿಸಿದಂತೆ ನಾಮಫಲಕ ಅಳವಡಿಸಿದರೆ, ರೈತರ ಗುಂಪು ನಾಮಫಲಕ ಕಿತ್ತು ಉಳುಮೆಗೆ ಮುಂದಾಗಿದೆ. ಈ ವೇಳೆ ಮಾತಿನ ಚಕಮಕಿ ನಡೆದು, ಗಲಾಟೆ ಹಂತಕ್ಕೆ ತಲುಪಿತ್ತು. ಪೊಲೀಸರು ಮಧ್ಯೆ ಪ್ರವೇಶಿಸಿ ಜಾಗದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಸೂಚಿಸಿದ್ದಾರೆ. ಹಾಗೆಯೇ ಉಳುಮೆಗೆ ಬಳಸಿದ್ದ ಟ್ರ್ಯಾಕ್ಟರ್ ವಶಪಡಿಸಿಕೊಂಡಿದ್ದಾರೆ.

**ದೂರು ದಾಖಲು:** ಚಿಂತಾಮಣಿಯ ಜಾಮೀಯಾ ಮಸೀದಿಯ ಇನಾಯತ್ ಎಂಬುವರು ವಕ್ಫ್ ಆಸ್ತಿ ಧ್ವಂಸಕ್ಕೆ ಸಂಬಂಧಿಸಿದಂತೆ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ನಾಗೇಶ್, ನಗರಸಭೆ ಮಾಜಿ ಸದಸ್ಯ ರಾಮಮೂರ್ತಿ, ವೆಂಕಟರೆಡ್ಡಿ, ಶಿವಾರೆಡ್ಡಿ ಮತ್ತಿತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮನವಿ ಮಾಡಿದ್ದಾರೆ.



ಚಿಂತಾಮಣಿಯ 31ನೇ ವಾರ್ಡಿನ ವಿವಾದಿತ ಜಮೀನಿನಲ್ಲಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡುತ್ತಿರುವುದು.

### ನ್ಯಾಯಾಲಯದಲ್ಲಿ ವಿವಾದ

ವಿವಾದಿತ ಜಾಗ ಫಕೀರ ಇನಾಂತಿ ಮತ್ತು ಮಕ್ಕಾನ್ ಇನಾಂತಿ ಜಮೀನಾಗಿದೆ. ಪ್ರಸ್ತುತ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಪ್ರಕರಣ ನ್ಯಾಯಾಲಯದಲ್ಲಿದೆ. ಹಲವು ವರ್ಷಗಳಿಂದ ಅನುಭವದಲ್ಲಿದ್ದ ರೈತರು ನಮ್ಮ ಜಮೀನು ಎಂದು ವಾದಿಸುತ್ತಿದ್ದರೆ, ರಾಜ್ಯ ವಕ್ಫ್ ಬೋರ್ಡ್ ಜಮೀನು ಎನ್ನುವುದು ಜಾಮೀಯಾ ಮಸೀದಿಯ ವಾದ.

ಈ ಹಿಂದೆ ಜಮೀನಿನ ಬಗ್ಗೆ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ಇತರ ನ್ಯಾಯಾಲಯಗಳಲ್ಲಿ ವಿವಾದದ ವಿಚಾರಣೆ ನಡೆದು, ಚಿಕ್ಕಬಳ್ಳಾಪುರ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ವಿವಾದಿತ ಸ.ನಂ: 13ರ 2.19 ಎಕರೆ ಮತ್ತು ಸ.ನಂ: 20ರ 2 ಎಕರೆ ಜಮೀನು ಮೈಸೂರು ರಾಜ್ಯ ಮಂಡಳಿಯ (ದಿನಾಂಕ: 28/03/1968ರ) ಅಧಿಸೂಚನೆಯಂತೆ ವಕ್ಫ್ ಸ್ವತ್ತು ಎಂದು ಉಲ್ಲೇಖವಾಗಿದೆ. ಸತ್ತಾರ್ ಸಾಬ್ ಅವರ ಹೆಸರಿಗೆ (ಸ್ವೀಕರಿಸಿದ ಸಂಖ್ಯೆ ಎಂಡಬ್ಲ್ಯುಬಿ (19)111964 ದಿನಾಂಕ 21/07/1965 ರಂದು) ಅಧಿಸೂಚನೆ ಹೊರಡಿಸಿ, ವಕ್ಫ್ ಆಸ್ತಿಯೆಂದು ತೀರ್ಪು ನೀಡಲಾಗಿದೆ. ಇದನ್ನು ಪ್ರಶ್ನಿಸಿ ರೈತರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ವಿವಾದಿತ ಸ್ಥಳದಲ್ಲಿ ಬೀಡುಬಿಟ್ಟಿರುವ ಪೊಲೀಸ್ ವಾಹನಗಳು.

### ಸ್ಥಳದಲ್ಲೇ ಖಾಕಿ ಠಿಕಾಣಿ

ಚಿಂತಾಮಣಿ ನಗರದ ದೊಡ್ಡಪೇಟೆಯ ಜಾಮೀಯಾ ಮಸೀದಿ ಕಮಿಟಿ ಪದಾಧಿಕಾರಿಗಳು ಜಮೀನನ್ನು ಸರ್ವೇ, ಹದ್ದುಬಸ್ತು ಮಾಡಿಸಿ, ಜಮೀನಿನ ಸುತ್ತಲೂ ಕಲ್ಲಿನ ಕೂಚು, ಮುಳ್ಳುತಂತಿ ಬೇಲಿ ಹಾಕಿಸಿ, ವಕ್ಫ್ ಆಸ್ತಿ ಎಂದು ಈ ಹಿಂದೆಯೇ ನಾಮಫಲಕ ಹಾಕಿಸಿದ್ದು, ಇದರ ನಡುವೆ ಮೊದಲಿನಿಂದಲೂ ವಿವಾದಿತ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ 31ನೇ ವಾರ್ಡ್‌ನ ನಾಗೇಶ್, ಶ್ರೀರಾಮರೆಡ್ಡಿ ಕುಟುಂಬ ಗುರುವಾರ ತಂತಿಬೇಲಿ ಕಿತ್ತು ಹಾಕಿದ್ದಾರೆ. ಇದು ಗಲಾಟೆಗೆ ಪ್ರಮುಖ ಕಾರಣವಾಗಿದ್ದು, ಪೊಲೀಸರು ಮಧ್ಯ ಪ್ರವೇಶಿಸಿ ಉದ್ವಿಗ್ನ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಡಿವೈಎಸ್‌ಪಿ ಮುರಳೀಧರ್, ಇನ್ಸ್‌ಪೆಕ್ಟರ್ ಶಿವರಾಜ್ ನೇತೃತ್ವದಲ್ಲಿ ಸಿಬ್ಬಂದಿ ಸ್ಥಳದಲ್ಲಿ ಠಿಕಾಣಿ ಹೂಡಿದ್ದು, ಬಿಗಿ ಭದ್ರತೆ ಕೈಗೊಂಡಿದ್ದಾರೆ. ತಹಸೀಲ್ದಾರ್ ಸುದರ್ಶನ್ ಯಾದವ್ ಜಮೀನು ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಸೂಚಿಸಿದ್ದಾರೆ.



ವಿವಾದಿತ ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸ್ ಅಧಿಕಾರಿಗಳು.

### ಜಿಲ್ಲೆಯಲ್ಲಿ ವಿವಾದಿತ ಪ್ರಕರಣಗಳು

ವಕ್ಫ್ ಜಾಗದ ವಿವಾದ ಪ್ರಕರಣಗಳು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಈ ಹಿಂದೆ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರು ಹುಟ್ಟೂರಿಗೆ ಸಮೀಪದಲ್ಲಿರುವ ಕಂದವಾರ ಗ್ರಾಮದಲ್ಲಿ ಸರ್ಕಾರಿ ಶಾಲೆಯನ್ನು ವಕ್ಫ್ ಜಾಗ ಎಂದು ಹೇಳಲಾಗಿತ್ತು. ಕೊನೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಪಹಣಿಯಲ್ಲಿ ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆಗೆ ಒಪ್ಪಿಸಲಾಗಿದೆ. ಶಿಡ್ಲಘಟ್ಟ ತಾಲೂಕಿನಲ್ಲಿ ಬೆಳ್ಳೂಟಿ ಆಂಜನೇಯಸ್ವಾಮಿ ದೇವಾಲಯದ ಜಾಗವನ್ನು ವಕ್ಫ್‌ಗೆ ಸೇರಿದ್ದು ಎಂಬುದಾಗಿ ಹೇಳುತ್ತಿರುವುದು ವಿವಾದಕ್ಕೆ ಕಾರಣವಾಗಿದೆ.

## ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕು ಶಿಕ್ಷಣ

**ಗುಡಿಬಂಡೆ:** ಮಕ್ಕಳು ತಮ್ಮ ಹಕ್ಕು ಹಾಗೂ ಸಾಮಾಜಿಕ ಕಾರ್ಯವನ್ನು ಕೈಗೊಳ್ಳಲು ಕಾನೂನಿನ ಸಾಮಾನ್ಯಜ್ಞಾನವನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ ಎಂದು ವಕೀಲರ ಸಂಘದ ಅಧ್ಯಕ್ಷ ರಾಮನಾಥ ರೆಡ್ಡಿ ತಿಳಿಸಿದರು.

ತಾಲೂಕಿನ ಮಾಚಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ ಗುಡಿಬಂಡೆ, ಸಾರ್ವಜನಿಕ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಗುರುವಾರ ಆಯೋಜಿಸಿದ್ದ ಕಾನೂನಿನ ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹದಿನೆಂಟು ವರ್ಷದ ಮಕ್ಕಳು ವಾಹನಗಳನ್ನು ಚಲಾಯಿಸಬಾರದು, ಬಾಲ್ಯ ವಿವಾಹ ಆಗಬಾರದು ಒಂದು ವೇಳೆ ತಮ್ಮಗೆ ತಿಳಿದಾಗ ಬಾಲ್ಯವಿವಾಹ ತಡೆಯಲು ಮುಂದಾಗಬೇಕು ಎಂದು ತಿಳಿಸುತ್ತಾ, ಇಂದಿನ ಮಕ್ಕಳೇ ಭವಿಷ್ಯದ ಪ್ರಜೆಗಳು. ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಪೋಷಣೆ ಮಾಡುವ ಉದ್ದೇಶದಿಂದ ಹಲವು ಕಾನೂನುಗಳು ಜಾರಿಯಾಗಿವೆ ಇವುಗಳ ಬಗ್ಗೆ ತಿಳಿವಳಿಕೆ ಪಡೆಯಬೇಕೆಂದರು.

ಪಠ್ಯಪುಸ್ತಕಗಳಲ್ಲಿ ವಿದ್ಯಾಥಿಗಳಿಗೆ ಸಾಧಕರ ಜೀವನದ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು. ವಿದ್ಯಾರ್ಥಿ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು, ಮಕ್ಕಳ ಸರ್ವಾಂಗೀಣ ಅಭಿವದ್ಧಿಗೆ ಶಿಕ್ಷಣ ಪೂರಕವಾಗಿದೆ ಎಂಬುವುದನ್ನು ಇಂದಿನ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು ಅವಶ್ಯವಾಗಿದೆ ಎಂದರು.

ಹಂಪಸಂದ್ರ ಗ್ರಾಮ ಪಂಚಾಯತಿ ಸದಸ್ಯ ನಾಗರಾಜ್ ಮಾತನಾಡಿ, ರಾಷ್ಟ್ರದ ಮುಂದಿನ ಭವಿಷ್ಯ ಇಂದಿನ ಶಾಲಾ ಕೊಠಡಿಗಳಲ್ಲಿ ನಿರ್ಮಾಣಗೊಳ್ಳುತ್ತಿದೆ. ಆದ್ದರಿಂದ, ಮಕ್ಕಳು ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡೆಸಿಕೊಂಡು ಉತ್ತಮ ಶಿಕ್ಷಣ ಪಡೆಯುವ ಮೂಲಕ ಶಿಕ್ಷಕರು ಮತ್ತು ಪಾಲಕರ ಮಾರ್ಗದರ್ಶನದಲ್ಲಿ ಸಾಗಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಬೇಕು ಎಂದರು.

# ಮಾಜಿಗೆ ಮೇಲುಗೈ, ಹಾಲಿಗೆ ಮುಖಭಂಗ

### ಗೆದರೆ ವಿಎಸ್ಸೆಸ್ಸೆನ್ ಚುನಾವಣೆಯಲ್ಲಿ ಎನ್.ಎಚ್ ಶಿವಶಂಕರರೆಡ್ಡಿ ಬಣಕ್ಕೆ ಗೆಲುವು

■ ವಿಜಯವಾಣಿ ಸುದ್ದಿಜಾಲ ಗೌರಿಬಿದನೂರು

ತಾಲೂಕಿನ ಗೆದರೆ ವ್ಯವಸಾಯ ಸೇವಾ ಸಹಕಾರದ ಸಂಘದ ಚುನಾವಣೆಯಲ್ಲಿ ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಬಣ ಮುಖಭಂಗ ಅನುಭವಿಸಿದ್ದು, ಮಾಜಿ ಸಚಿವ ಎನ್.ಎಚ್. ಶಿವಶಂಕರರೆಡ್ಡಿ ನೇತೃತ್ವದ ಕಾಂಗ್ರೆಸ್ ಹಾಗೂ ಜಿಪಂ ಮಾಜಿ ಅಧ್ಯಕ್ಷ ಎಚ್.ವಿ.ಮಂಜುನಾಥ್ ಬಣ ಗೆಲುವು ಸಾಧಿಸಿದೆ.

ಸಂಘದ 12 ನಿರ್ದೇಶಕರ ಸ್ಥಾನಗಳ ಪೈಕಿ ಠೇವಣಿದಾರರ ಕ್ಷೇತ್ರದಿಂದ ಜಿ.ಸಿ. ಸತೀಶ್ ಅವಿರೋಧ ಆಯ್ಕೆಯಾಗಿದ್ದರು. ಉಳಿದ 11 ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಸೀತಾರಾಮ್, ಸಾಮಾನ್ಯ ಕ್ಷೇತ್ರದಿಂದ ಜಮದ್‌ಖಾನ್, ಜಿ.ಎನ್.ಕೃಷ್ಣಾರೆಡ್ಡಿ, ಶ್ರೀರಾಮಯ್ಯ, ಜಿ.ಎನ್. ಬಸವರಾಜ್, ಮಹಿಳಾ ಕ್ಷೇತ್ರದಿಂದ ಪದ್ಮಾವತಮ್ಮ, ಬಿಸಿಎಂ-ಬಿ ಕ್ಷೇತ್ರದಿಂದ ಶ್ರೀನಿವಾಸ್ ರೆಡ್ಡಿ, ಬಿಸಿಎಂ-ಎ ಕ್ಷೇತ್ರದಿಂದ ಲಕ್ಷ್ಮೀಪತಿ, ಪರಿಶಿಷ್ಟ ಜಾತಿ ಕ್ಷೇತ್ರದಿಂದ ತಿಪ್ಪಕ್ಕ, ಪರಿಶಿಷ್ಟ ಪಂಗಡದಿಂದ ರಾಮನಾಯಕ್ ಆಯ್ಕೆಯಾಗಿದ್ದಾರೆ.



ಗೌರಿಬಿದನೂರು ತಾಲೂಕಿನ ಗೆದರೆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಆಯ್ಕೆಯಾಗಿರುವ ನೂತನ ನಿರ್ದೇಶಕರೊಂದಿಗೆ ಗ್ರಾಮದ ಮುಖಂಡರು ವಿಜಯೋತ್ಸವ ಆಚರಿಸಿದರು.ಜಿ.ಸಿ. ಸತೀಶ್, ಜಿ.ಎನ್. ಕೃಷ್ಣಾರೆಡ್ಡಿ, ಬಸವರಾಜು, ಲಕ್ಷ್ಮೀಪತಿ, ಶ್ರೀನಿವಾಸರೆಡ್ಡಿ, ತಿಪ್ಪಕ್ಕ, ಪದ್ಮಾವತಮ್ಮ ಮತ್ತಿತರರು ಇದ್ದರು.

### ಶಾಸಕರ ಬಣಕ್ಕೆ ಲಾಟರಿ ಲಕ್ಷ್ಮೀ

ಅವಿರೋಧವಾಗಿ ಆಯ್ಕೆಯಾದ ಜಿ. ಸಿ. ಸತೀಶ್ ಹಾಗೂ ಗೆದ್ದಿರುವ 10 ನಿರ್ದೇಶಕರು ಮಾಜಿ ಸಚಿವ ಶಿವಶಂಕರರೆಡ್ಡಿ ಬಣಕ್ಕೆ ಸೇರಿದವರಾಗಿದ್ದಾರೆ. ಉಳಿದ ಮಹಿಳಾ ಕ್ಷೇತ್ರಕ್ಕೆ ಸ್ಪರ್ಧಿಸಿದ್ದ ನಿರ್ಮಲಾ ಹಾಗೂ ಯಶೋದಮ್ಮ ಇಬ್ಬರೂ ತಲಾ 51 ಮತ ಪಡೆದಿದ್ದರಿಂದ ಚುನಾವಣಾಧಿಕಾರಿ ಎನ್. ಶಿವಲಿಂಗಪ್ಪ ಲಾಟರಿ ಮೂಲಕ ಆಯ್ಕೆಗೆ ಮೊರೆ ಹೋದರು. ಲಾಟರಿಯಲ್ಲಿ ಅದೃಷ್ಟ ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ ಬಣದ ನಿರ್ಮಲಾ ಅವರಿಗೆ ಒಲಿಯಿತು.

> ಸ್ಥಳೀಯ ಮುಖಂಡರ ಸ್ವಾಭಿಮಾನ ಮತ್ತು ರಾಜಕೀಯ ಅಸ್ತಿತ್ವಕ್ಕಾಗಿ ಈ ಚುನಾವಣೆಯಲ್ಲಿ ಹೋರಾಟ ನಡೆಸಲಾಯಿತು. ಹೋರಾಟದಲ್ಲಿ ಯಶಸ್ವಿಯಾಗಿ ಗೆಲುವು ಸಾಧಿಸಲಾಗಿದೆ.
> | **ಎಚ್.ವಿ. ಮಂಜುನಾಥ್** ಜಿಪಂ ಮಾಜಿ ಅಧ್ಯಕ್ಷ

> ವಿಧಾನಸಭಾ ಚುನಾವಣೆ ಬಳಿಕ ನಡೆದ ರಾಜಕೀಯ ಬೆಳವಣಿಗೆಗಳಿಂದ ಬೇಸತ್ತು ಸಂಘದ ಚುನಾವಣೆಯಲ್ಲಿ ಸಿಂಡಿಕೇಟ್ ರಚಿಸಿಕೊಂಡಿದ್ದೆವು. ಜನ ನಮ್ಮ ಮೇಲೆ ವಿಶ್ವಾಸವಿರಿಸಿ ಗೆಲುವು ನೀಡಿದ್ದಾರೆ.
> | **ಜಿ.ಸಿ.ಸತೀಶ್** ನೂತನ ನಿರ್ದೇಶಕ

### ವಿಶ್ವಾಸ ಕಳೆದುಕೊಂಡರೇ ಕೆಎಚ್‌ಪಿ?



ಮಾಜಿ ಸಚಿವ ಶಿವಶಂಕರರೆಡ್ಡಿ ಮಾತನಾಡಿ, ಶಾಸಕರ ಬಣದವರು ಚುನಾವಣೆಗೆ ಹಣದ ಹೊಳೆಯನ್ನೇ ಹರಿಸಿದರು. ಆದರೆ ಜನ ಹಣಕ್ಕೆ ಕಿಮ್ಮತ್ತು ನೀಡಲಿಲ್ಲ. ಕಾಂಗ್ರೆಸ್ ಹಾಗೂ ಮಂಜುನಾಥ್ ಅನುಯಾಯಿಗಳನ್ನು ಒಳಗೊಂಡ ಸಿಂಡಿಕೇಟ್‌ಗೆ ಅಭೂತಪೂರ್ವ ಗೆಲುವು ನೀಡಿದ್ದಾರೆ. ಶಾಸಕ ಪುಟ್ಟಸ್ವಾಮಿಗೌಡರು ಅಧಿಕಾರಕ್ಕೆ ಬಂದ ಬಳಿಕ ಗೆಲುವಿಗೆ ಕಾರಣರಾದ ಮುಖಂಡರು ಮತ್ತು ಕಾರ್ಯಕರ್ತರು ಹಾಗೂ ಜನರ ವಿಶ್ವಾಸ ಕಳೆದುಕೊಂಡಿದ್ದಾರೆ ಎಂಬುದಕ್ಕೆ ಈ ಚುನಾವಣೆ ಫಲಿತಾಂಶ ಸಾಕ್ಷಿಯಾಗಿದೆ. ಮುಂಬರುವ ಚುನಾವಣೆಗಳಿಗೆ ಈ ಫಲಿತಾಂಶ ದಿಕ್ಸೂಚಿಯಾಗಿದೆ ಎಂದರು.

### ವಿರೋಧಿಗಳ ಪ್ರತಿತಂತ್ರ

ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ ಬಣದ ಗೆಲುವಿಗೆ ಜಿಪಂ ಮಾಜಿ ಅಧ್ಯಕ್ಷ ಎಚ್.ವಿ. ಮಂಜುನಾಥ್ ಪ್ರಮುಖ ಪಾತ್ರ ವಹಿಸಿದ್ದರು. ಚುನಾವಣೆ ಬಳಿಕ ಇಬ್ಬರೂ ಅಂತರ ಕಾಯ್ದುಕೊಂಡಿದ್ದರು. ಈಗ ಸ್ಥಳೀಯ ರಾಜಕೀಯ ಅಸ್ತಿತ್ವ ಕಾಪಾಡಿಕೊಳ್ಳುವ ವ್ಯವಸಾಯ ಸೇವಾ ಸಹಕಾರ ಸಂಘ ಚುನಾವಣೆಯಲ್ಲಿ ಮಾಜಿ ಸಚಿವ ಶಿವಶಂಕರರೆಡ್ಡಿ ಹಾಗೂ ಎಚ್.ವಿ ಮಂಜುನಾಥ್ ನೇತೃತ್ವದ ಬಣ ಒಂದಾಗಿ ಶಾಸಕ ಪುಟ್ಟಸ್ವಾಮಿಗೌಡ ಬಣದ ವಿರುದ್ಧ ತಂತ್ರ ರೂಪಿಸಿ ಬೆಂಬಲಿಗರನ್ನು ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಗೆಲುವಿನಿಂದಾಗಿ ಶಿವಶಂಕರ ರೆಡ್ಡಿ ಹಾಗೂ ಎಚ್.ವಿ. ಮಂಜುನಾಥ್ ಒಂದಾಗುತ್ತಾರಾ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಹರಿದಾಡುತ್ತಿದೆ.

## ಕರೊನಾ ತನಿಖೆ ಯಾವ ಸಂಸ್ಥೆಗಾದರೂ ನೀಡಲಿ

**ಚಿಕ್ಕಬಳ್ಳಾಪುರ:** ಕರೊನಾ ಹಗರಣದ ತನಿಖೆಯನ್ನು ಯಾವ ಸಂಸ್ಥೆಗಾದರೂ ವಹಿಸಲಿ ಎಂದು ಸಂಸದ ಡಾ. ಕೆ.ಸುಧಾಕರ್ ವ್ಯಂಗ್ಯವಾಡಿದರು. ತಾಲೂಕಿನ ಗೇರಹಳ್ಳಿಯಲ್ಲಿ ಸಾಯಿಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಸ್ಥಾಪಿಸಲಾಗಿರುವ ನೂತನ 'ಅಮೃತಗಂಗೆ' ಶುದ್ಧ ಕುಡಿಯುವ ನೀರಿನ ಘಟಕವನ್ನು ಶುಕ್ರವಾರ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಕರೊನಾ ಹಗರಣದ ಬಗ್ಗೆ ಕಾಂಗ್ರೆಸ್ ಸುಳ್ಳು ಪ್ರಚಾರ ನಡೆಸುತ್ತಿದೆ.

» **ಸಂಸದ ಡಾ.ಕೆ. ಸುಧಾಕರ್ ವ್ಯಂಗ್ಯ**

ಅದರ ರಾಜ್ಯ ಸರ್ಕಾರದ ಆಡಳಿತಾವಧಿಯಲ್ಲಿನ ಭ್ರಷ್ಟಾಚಾರ, ಅವ್ಯವಹಾರಗಳನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸುವ ಹುನ್ನಾರ ಅಷ್ಟೇ ಎಂದರು.ಮೊದಲು ಡಿಸಿಎಂ ಅಧ್ಯಕ್ಷತೆಯಲ್ಲಿ 7 ಪ್ರಭಾವಿ ಸಚಿವರ ಉಪ ಸಂಪುಟ ಸಮಿತಿ ಮೇಲೆ ನಂಬಿಕೆ ಇಲ್ಲದೇ ಕರೊನಾ ಹಗರಣ ತನಿಖೆಯ ಹೊಣೆಯನ್ನು ಎಸ್‌ಐಟಿಗೆ ಒಪ್ಪಿಸಲಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಕೋಚಿಮುಲ್ ಮಾಜಿ ಅಧ್ಯಕ್ಷ ಕೆ.ವಿ.ನಾಗರಾಜ್, ನಗರಸಭಾ ಅಧ್ಯಕ್ಷ ಎ.ಗಜೇಂದ್ರ, ಮುಖಂಡ ಆವಲಗುರ್ಕಿ ರಾಜಣ್ಣ ಮತ್ತಿತರರು ಇದ್ದರು.

**ಆಸ್ಟ್ರೇಲಿಯಾದಲ್ಲಿದ್ದೆ:** ಒನಕೆ ಓಬವ್ವ ಜಯಂತ್ಯುತ್ಸವ ಆಚರಣೆ ದಿನದಂದು ಆಸ್ಟ್ರೇಲಿಯಾದಲ್ಲಿದ್ದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.



ಚಿಕ್ಕಬಳ್ಳಾಪುರ ತಾಲೂಕಿನ ಗೇರಹಳ್ಳಿಯಲ್ಲಿ ನಿರ್ಮಿಸಿರುವ ನೂತನ 'ಅಮೃತಗಂಗೆ' ಶುದ್ಧ ಕುಡಿಯುವ ನೀರಿನ ಘಟಕವನ್ನು ಸಂಸದ ಡಾ ಕೆ.ಸುಧಾಕರ್ ಉದ್ಘಾಟಿಸಿದರು. ಕೋಚಿಮುಲ್ ಮಾಜಿ ಅಧ್ಯಕ್ಷ ಕೆ.ವಿ.ನಾಗರಾಜ್, ಮುಖಂಡ ಆವಲಗುರ್ಕಿ ರಾಜಣ್ಣ ಮತ್ತಿತರರು ಇದ್ದರು.

ಸ್ಥಳೀಯ ಜನಪ್ರತಿನಿಧಿಗಳು ಹಾಜರಾಗಬೇಕಾಗಿತ್ತು ಎಂದು ಗೈರಿನ ಬಗ್ಗೆ ದಲಿತ ಮುಖಂಡರು ವ್ಯಕ್ತಪಡಿಸಿದ ಅಸಮಾಧಾನದ ಮಾತುಗಳಿಗೆ ಸಂಸದರು. ಪ್ರತಿಕ್ರಿಯಿಸಿದರು.

9ನೇ ವರ್ಷದ ಚಿರಸ್ಮರಣೆ

ಶ್ರೀ ಬಿ. ಆರ್. ಪ್ರಕಾಶ್, ಪೊಲೀಸ್ ಇಲಾಖೆ
ನಿಧನ : 16–11–2015
ಈ ಒಂಭತ್ತು ವರ್ಷದಲ್ಲಿ ನಿನ್ನನ್ನು ನೆನೆದು ದುಃಖಿಸದೆ ಇರುವ ದಿನವೇ ನಮ್ಮಲ್ಲಿಲ್ಲ ಎಂದು ನೆನೆಯುವ
ನಿನ್ನ – ತಾಯಿ, ಅಣ್ಣಂದಿರು, ಅಕ್ಕಂದಿರು, ಹೆಂಡತಿ, ಮಕ್ಕಳು ಮತ್ತು ಸ್ನೇಹಿತರು ಹಾಗೂ ಬಂಧು ಬಳಗದವರು